STAR

## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 996 |
| ಉತ್ತರಿಸುವ ದಿನಾಂಕ | 24-07-2024 |
| ಮಾನ್ಯ ಸದಸ್ಯರ ಹೆಸರು | ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯ ಸರ್ಕಾರ ಕಳೆದ ವರ್ಷ ರಾಜ್ಯಾದ್ಯಂತ ಜಮೀನುಗಳ ಮಾರ್ಗಸೂಚಿ ದರಗಳನ್ನು (Guidence Value) ಹೆಚ್ಚುವರಿ ಮಾಡಿದ್ದು, ಹೆಚ್ಚುವರಿ ಮಾಡಲು ಕಾನೂನಿನ ಆಧಾರ ಹಾಗೂ ಸುತ್ತೋಲೆಗಳಾವುವು; ಮತ್ತು ಅನುಸರಿಸಲಾದ ಮಾನದಂಡಗಳೇನು; (ಮಾಹಿತಿ ಒದಗಿಸುವುದು) | ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ 45(ಬಿ) ರಡಿಯಲ್ಲಿ ರಚಿಸಿರುವ (Constitution of Central Valuation Committee for Estimation, Publication and Revision of market value Guidelines of properties) Rules, 2003 ರನ್ವಯ ನಿಯಮಗಳು 5, 6, 7 ಮತ್ತು 8ರಲ್ಲಿ ಸೂಚಿಸಿರುವಂತೆ ಪ್ರತಿ ವರ್ಷ ಸ್ಥಿರಾಸ್ತಿಗಳ ಪರಿಷ್ಕೃತ ಸರಾಸರಿ ಅಂದಾಜು ಮಾರುಕಟ್ಟೆ ಮೌಲ್ಯಗಳ ಮಾರ್ಗಸೂಚಿಯನ್ನು ತಯಾರಿಸಿ ಜಾರಿಗೊಳಿಸಲಾಗಿದೆ. |
| ಆ | ಕಳೆದ ಹತ್ತು ವರ್ಷಗಳಿಂದ ಬಾಗಲಕೋಟೆ, ವಿಜಯಪುರ ಅವಳಿ ಜಿಲ್ಲೆಗಳ ಮಾರ್ಗಸೂಚಿ ದರಗಳಲ್ಲಿ ಏನೂ ಹೆಚ್ಚುವರಿ ಮಾಡದೇ ಕಳೆದ ವರ್ಷ ಮಾತ್ರವೆ ಕೆಲವು ತಾಲ್ಲೂಕಿನ ಜಮೀನುಗಳ ದರಗಳನ್ನಷ್ಟೇ ಪರಿಷ್ಕರಣೆ ಮಾಡಿ ಮುಳುಗಡೆ ಪ್ರದೇಶ ವ್ಯಾಪ್ತಿಯ ಬಾಗಲಕೋಟೆ, ಹುನುಗುಂದ ಮತ್ತು ಬಬಲೇಶ್ವರ, ಬಾಗೇವಾಡಿ ತಾಲ್ಲೂಕಿನ ಜಮೀನುಗಳ ದರ ಹೆಚ್ಚುವರಿ ಮಾಡದೇ ಬಿಟ್ಟಿರುವುದಕ್ಕೆ ಕಾರಣಗಳೇನು; ಇದರಿಂದ ರೈತರು ಭೂ ಸ್ವಾಧೀನ ಹೊಸ ಕಾನೂನಿನಂತೆ ನ್ಯಾಯಯುತವಾದ ಪರಿಹಾರ ಪಡೆಯುವಲ್ಲಿ ವಂಚಿತರಾಗಬಹುದಾದ ಮಾಹಿತಿ ಸರ್ಕಾರಕ್ಕೆ ಬಂದಿದೆಯೇ; | ಭೂ ಸ್ವಾಧೀನಕ್ಕೆ ಒಳಪಟ್ಟ ಮುಳುಗಡೆ ಭಾಗದ ಗ್ರಾಮಗಳಿಗೆ ಸಂಬಂಧಿಸಿದಂತೆ ನ್ಯಾಯಯುತ ಪರಿಹಾರದ ಹಕ್ಕು ಮತ್ತು ಭೂ ಸ್ವಾಧೀನದಲ್ಲಿ ಪಾರದರ್ಶಕತೆ, ಪುನರ್ವಸತಿ ಮತ್ತು ಪುನರ್ವಸತಿ ಕಾಯ್ದೆ 2013ರ ಸೆಕ್ಷನ್ 26 ಪ್ರಕಾರ ಭೂಮಿ ಸ್ವಾಧೀನಕ್ಕೆ ಒಳಪಡುವ ಜಮೀನುಗಳ ಮಾರುಕಟ್ಟೆ ದರಗಳನ್ನು ನಿಗದಿಪಡಿಸಲು ಜಿಲ್ಲಾಧಿಕಾರಿಗಳು ಅನುಸರಿಸಬೇಕಾದ ಕೆಲವೊಂದು ಮಾನದಂಡಗಳ ಬಗ್ಗೆ ಉಲ್ಲೇಖ ಇದ್ದು, ಸದರಿ ಮಾನದಂಡಗಳ ಅನುಸಾರ ಜಿಲ್ಲಾಧಿಕಾರಿಗಳಿಗೆ ಮಾರುಕಟ್ಟೆ ದರ ನಿರ್ಣಯಿಸುವ ಅಧಿಕಾರ ಹೊಂದಿರುತ್ತಾರೆ.<br><br>ಮುಂದುವರೆದು ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರಡಿ ಭೂ ಸ್ವಾಧೀನಕ್ಕೆ ಒಳಪಡುವ ಜಮೀನುಗಳಿಗೆ ನ್ಯಾಯಬದ್ಧ ಪರಿಹಾರ ದರವನ್ನು ನಿಗದಿಪಡಿಸುವ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ಕಂಇ 24 ಎಕ್ಯೂವಿ 2022, ದಿನಾಂಕ:25.01.2023 ರ ಆದೇಶದಂತೆ ಒಪ್ಪಂದದ ಐತೀರ್ಪು ರಚಿಸಿ ಏಕರೂಪ ದರ ನಿಗದಿಪಡಿಸಿ ಆದೇಶಿಸಿದ ಹಿನ್ನೆಲೆಯಲ್ಲಿ, ಪ್ರಸ್ತುತ ಸಾಲಿನಲ್ಲಿ ಕೇಂದ್ರ ಮೌಲ್ಯಮಾಪನ ಸಮಿತಿಯಲ್ಲಿ |

| | | |
|---|---|---|
| | | ಮುಳುಗಡೆ ಭಾಗದ ಊರುಗಳ ಮಾರ್ಗಸೂಚಿ ದರಗಳ ಪರಿಷ್ಕರಣೆಗೆ ಪರಿಗಣಿಸಿರುವುದಿಲ್ಲ. |
| ಇ | ಹಾಗಿದ್ದಲ್ಲಿ, ಈ ತಾಲ್ಲೂಕಿನ ಜಮೀನುಗಳ ಮಾರ್ಗಸೂಚಿ ದರಗಳನ್ನು ಹೆಚ್ಚಿಗೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ಸಂಪೂರ್ಣ ಮಾಹಿತಿ ನೀಡುವುದು) | ಕೇಂದ್ರ ಮೌಲ್ಯ ಮಾಪನ ಸಮಿತಿಯು ಕೇವಲ ಸ್ಥಿರಾಸ್ತಿಗಳ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿ ದರವನ್ನು ಮಾತ್ರ ಪರಿಷ್ಕರಿಸುತ್ತದೆ. ಭೂ-ಸ್ವಾಧೀನವಾಗಿರುವ ಸ್ಥಿರಾಸ್ತಿಗಳಿಗೆ ಮಾರುಕಟ್ಟೆ ದರವನ್ನು ನಿರ್ಣಯಿಸಲು The Right To Fair Compensation and Transparency in Land Acquisition Resettlement Act, 2013 ರನ್ವಯ ಜಿಲ್ಲಾಧಿಕಾರಿಗಳ ವ್ಯಾಪ್ತಿಗೆ ಬರುತ್ತದೆ. |

ಕಂಇ/131/ಎಂಎನ್‌ಎಸ್‌ಎ/2024

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು